ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ
ಜಿಲ್ಲಾ ಆಯುಷ್ ಅಧಿಕಾರಿಗಳ ಕಾರ್ಯಾಲಯ,
ಜಿಲ್ಲಾಡಳಿತ ಭವನ, ರೂಮ್ ನಂ.ಜಿ.ಎ.11, ಶಿಡ್ಲಘಟ್ಟ ರಸ್ತೆ, ಚಿಕ್ಕಬಳ್ಳಾಪುರ-562101
ಇ-ಮೇಲ್:ayushcbpur@gmail.com ದೂರವಾಣಿ ನಂ-08156-277141

---

ಸಂಖ್ಯೆ:ಜಿ.ಆ.ಕ.ಚಿ/43/ಗು.ಸಿಬ್ಬಂದಿ/2023-24 ದಿನಾಂಕ:09-02-2024

# ಪ್ರಕಟಣೆ

ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ, ಚಿಕ್ಕಬಳ್ಳಾಪುರ ಇದರ ವ್ಯಾಪ್ತಿಯಲ್ಲಿ ರಾಷ್ಟ್ರೀಯ ಆಯುಷ್ ಅಭಿಯಾನದಡಿಯಲ್ಲಿ ಅಭಿವೃದ್ಧಿಪದಿಸಲಾದ ಆಯುಷ್ ಆರೋಗ್ಯ ಮತ್ತು ಕ್ಷೇಮ ಕೇಂದ್ರ, ಸೋಮೇನಹಳ್ಳಿ ಇಲ್ಲಿಗೆ Community Health officer (CHO) ಹುದ್ದೆಯ ನ್ನು ಗುತ್ತಿಗೆ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳಲು ಮಾನ್ಯ ಆಯುಕ್ತರು, ಆಯುಷ್ ಇಲಾಖೆ ರವರು ನಿಗದಿಪಡಿಸಿರುವ ನಿಯಮಗಳು/ಮಾರ್ಗಸೂಚಿಗಳನ್ವಯ ಆಸಕ್ತಿಯುಳ್ಳ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಹುದ್ದೆ ವಿವರ ಕೆಳಗಿನಂತಿದೆ.

| Sl.no | Facility | Posts | Qualification | Salary | Duration |
|---|---|---|---|---|---|
| 1 | Ayush Health and wellness center under Ayushmanbharath | Community Health Officer (CHO) | BAMS | Rs.40000 per month [Rs.25000/- per month as a fixed remuneration and Rs. 15000/- per month as Performance Linked Payment (PLP)] | There will be no provision of contractual CHO for those Ayush dispensaries where regular AYUSH physicians Are in the position However for other the provision of Cho on contractual basis shall b for a maximum period of one year or till the vacancy is filled up Cho would be qualified Ayush physician in the particular stream of selected service such as Ayurveda, Unani, Siddha, and Homoeopathy. |

## Main Duties of Community Health Officer (CHO)

1. Attend daily OPD in HWC and in the community as per the schedule
2. Overall planning and monitoring of community level activities including yoga and Herbal garden.
3. Participate / organize meetings.
4. The CHO as a team Leader and in-charge of HWC will broadly be expected to carry out Public health functions, ambulatory care and management.
5. Ensure that all households in the service areas are listed empanelled a database is Maintained in digital format / paper format as required by state.
6. Prakriti analysis of every population in the catchment area above 18 years of age.
7. Any other work assigned by DAO.

ಅಭ್ಯರ್ಥಿಗಳು ಸ್ವ–ವಿವರ ಹೊಂದಿದ ತಮ್ಮ ವೈಯಕ್ತಿಕ ವಿವರ (ಬಯೋಡೆಟಾ) ಭಾವಚಿತ್ರ ಹಾಗೂ ದೃಢೀಕೃತ ಪ್ರಮಾಣ ಪತ್ರಗಳು ಮತ್ತು ಅಗತ್ಯ ದಾಖಲಾತಿಗಳೊಂದಿಗೆ ಅರ್ಜಿಗಳನ್ನು ಜಿಲ್ಲಾಧಿಕಾರಿಗಳು ಚಿಕ್ಕಬಳ್ಳಾಪುರ ರವರ ಎನ್.ಐ.ಸಿ ವೆಬ್‌ಸೈಟ್ https://chikkaballapur.nic.in ನಿಂದ ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಂಡು ಸೂಚನೆಗಳನ್ನು ಓದಿಕೊಂಡು ಅರ್ಜಿಯಲ್ಲಿ ಕೋರಿರುವ ಮಾಹಿತಿಯನ್ನು ಕ್ರಮಬದ್ಧವಾಗಿ ನಮೂದಿಸಿ, **ದಿನಾಂಕ: 09–02–2024 ರಿಂದ ಪ್ರಾರಂಭಿಸಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:21–02–2024 ಸಂಜೆ: 4.00 ಗಂಟೆ** ಯೊಳಗಾಗಿ ಜಿಲ್ಲಾ ಆಯುಷ್ ಕಛೇರಿ, ಜಿಲ್ಲಾಡಳಿತ ಭವನ, ಚಿಕ್ಕಬಳ್ಳಾಪುರ ಈ ವಿಳಾಸಕ್ಕೆ ಕೊನೆಯ ದಿನಾಂಕದೊಳಗೆ ತಲುಪುವಂತೆ ನೇರವಾಗಿ ಅಥವಾ ರಿಜಿಸ್ಟರ್ ಅಂಚೆಯ ಮೂಲಕ ಸಲ್ಲಿಸಲು ಸೂಚಿಸಿದೆ. ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ:9902045775 ಇಲ್ಲಿಗೆ ಸಂಪರ್ಕಿಸಲು ಸೂಚಿಸಿದೆ.

**ವಿಶೇಷ ಸೂಚನೆ:** ಅಪೂರ್ಣ, ಅಸ್ಪಷ್ಟ ಅರ್ಜಿಗಳು ಹಾಗೂ ಅವಧಿ ಮೀರಿ ಬರುವ ಅರ್ಜಿಗಳನ್ನು ಯಾವುದೇ ಮುನ್ಸೂಚನೆ ನೀಡದೆ ತಿರಸ್ಕರಿಸಲಾಗುವುದು. ಮೇಲಿನ ಹುದ್ದೆಯು ಗುತ್ತಿಗೆ ಆಧಾರದ ಸಂಪೂರ್ಣ ತಾತ್ಕಾಲಿಕ ಹುದ್ದೆಯಾಗಿದ್ದು, ಈ ಗುತ್ತಿಗೆ ಆಧಾರದ ನೇಮಕಾತಿಯು ಆಯುಷ್ ನಿರ್ದೇಶನಾಲಯ, ಬೆಂಗಳೂರು ಇವರು ಕಾಲಕಾಲಕ್ಕೆ ಬದಲಾವಣೆಯಾಗುವ ಇಲಾಖೆಯ ಮಾರ್ಗಸೂಚಿಗಳು ವಿಧಿಸುವ ಷರತ್ತು ಮತ್ತು ನಿಬಂಧನೆಗೆ ಒಳಪಟ್ಟಿರುತ್ತದೆ.

Bhanu

**ಜಿಲ್ಲಾ ಆಯುಷ್ ಅಧಿಕಾರಿಗಳು**
**ಹಾಗೂ ಸದಸ್ಯ ಕಾರ್ಯದರ್ಶಿಗಳು,**
**ಚಿಕ್ಕಬಳ್ಳಾಪುರ.**

ಜಿಲ್ಲಾ ಆಯುಷ್ ಅಧಿಕಾರಿಗಳು
ಜಿಲ್ಲಾ ಆಯುಷ್ ಕಛೇರಿ
ಚಿಕ್ಕಬಳ್ಳಾಪುರ - 562 101

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ
ಜಿಲ್ಲಾ ಆಯುಷ್ ಅಧಿಕಾರಿಗಳ ಕಾರ್ಯಾಲಯ,
ಜಿಲ್ಲಾಡಳಿತ ಭವನ, ರೂಮ್ ನಂ.ಜಿ.ಎ.11, ಶಿಡ್ಲಘಟ್ಟ ರಸ್ತೆ, ಚಿಕ್ಕಬಳ್ಳಾಪುರ-562101
ಇ-ಮೇಲ್:ayushcbpur@gmail.com ದೂರವಾಣಿ ನಂ-08156-277141

ಸಂಖ್ಯೆ:ಜಿ.ಆ.ಕ.ಚಿ/43/ಗು.ಸಿಬ್ಬಂದಿ/2023-24 ದಿನಾಂಕ:09-02-2024

# ಅಧಿಸೂಚನೆ

ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ, ಚಿಕ್ಕಬಳ್ಳಾಪುರ ಇದರ ವ್ಯಾಪ್ತಿಯಲ್ಲಿ ರಾಷ್ಟ್ರೀಯ ಆಯುಷ್ ಅಭಿಯಾನದಡಿಯಲ್ಲಿ ಅಭಿವೃದ್ಧಿಪದಿಸಲಾದ ಆಯುಷ್ ಆರೋಗ್ಯ ಮತ್ತು ಕ್ಷೇಮ ಸೋಮೇನಹಳ್ಳಿ ಇಲ್ಲಿಗೆ ಸಮುದಾಯ ಆರೋಗ್ಯ ಅಧಿಕಾರಿ/ Community Health officer (CHO) ಹುದ್ದೆಯನ್ನು ಗುತ್ತಿಗೆ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳಲು ಮಾನ್ಯ ಆಯುಕ್ತರು, ಆಯುಷ್ ಇಲಾಖೆ ರವರು ನಿಗದಿಪಡಿಸಿರುವ ನಿಯಮಗಳು/ಮಾರ್ಗಸೂಚಿಗಳನ್ವಯ ಆಸಕ್ತಿಯುಳ್ಳ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.

**ನೇಮಕಾತಿ ಮಾಡಿಕೊಳ್ಳಬೇಕಾದ ಹುದ್ದೆಯ ವಿವರ ಈ ಕೆಳಕಂಡಂತಿರುತ್ತದೆ.**

| Sl.no | Facility | Posts | Qualification | Salary | Duration |
|---|---|---|---|---|---|
| 1 | Ayush Health and wellness center under Ayushmanbharat | Community Health Officer (CHO) | BAMS | Rs.40000 per month [Rs.25000/- per month as a fixed remuneration and Rs. 15000/- per month as Performance Linked Payment (PLP)] | There will be no provision of contractual CHO for those Ayush dispensaries where regular AYUSH physicians Are in the position However for other the provision of Cho on contractual basis shall b for a maximum period of one year or till the vacancy is filled up Cho would be qualified Ayush physician in the particular stream of selected service such as Ayurveda, Unani, Siddha, and Homoeopathy. |

ಅಭ್ಯರ್ಥಿಗಳು ಜಿಲ್ಲಾಧಿಕಾರಿಗಳು ಚಿಕ್ಕಬಳ್ಳಾಪುರ ರವರ ಎನ್.ಐ.ಸಿ ವೆಬ್‌ಸೈಟ್ ನಿಂದ ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಂಡು ಸೂಚನೆಗಳನ್ನು ಓದಿಕೊಂಡು ಅರ್ಜಿಯಲ್ಲಿ ಕೋರಿರುವ ಮಾಹಿತಿಯನ್ನು ಕ್ರಮಬದ್ಧವಾಗಿ ನಮೂದಿಸಿ, ಕಲರ್ ಫೋಟೋ ಅಂಟಿಸಿ, ಸಹಿ ಮಾಡಿ, ಅರ್ಜಿಯಲ್ಲಿ ಕೋರಿದಂತೆ ಭಾವಚಿತ್ರ/ಸಹಿ/ವಯೋಮಿತಿ/ವಿದ್ಯಾರ್ಹತೆ/ಅನುಭವ ಇತ್ಯಾದಿ ಎಲ್ಲಾ ವಿವರಗಳನ್ನು ಕಡ್ಡಾಯವಾಗಿ ಭರ್ತಿ ಮಾಡಿ ಕಡ್ಡಾಯವಾಗಿ ಲಗತ್ತಿಸಿ (ನಕಲು ಪ್ರತಿಗಳು), ಅರ್ಜಿಯನ್ನು ಕಡ್ಡಾಯವಾಗಿ ಮೇಲ್ಕಂಡ ಜಿಲ್ಲಾ ಆಯುಷ್ ಕಛೇರಿ ವಿಳಾಸಕ್ಕೆ ಕೊನೆಯ ದಿನಾಂಕದೊಳಗೆ ತಲುಪುವಂತೆ ನೇರವಾಗಿ ಅಥವಾ ರಿಜಿಸ್ಟರ್ ಅಂಚೆಯ ಮೂಲಕ ಸಲ್ಲಿಸುವುದು.

ಅಭ್ಯರ್ಥಿಗಳು ಅರ್ಜಿಯನ್ನು ಭರ್ತಿ ಮಾಡುವ ಮೊದಲು ಅಧಿಸೂಚನೆಯಲ್ಲಿ ನೀಡಿರುವ ಅರ್ಜಿ ಭರ್ತಿ ಮಾಡುವ ಕುರಿತ ಸೂಚನೆಗಳು ಮತ್ತು ಅರ್ಹತಾ ಷರತ್ತುಗಳನ್ನು ಓದಿಕೊಳ್ಳತಕ್ಕದ್ದು. ನಂತರ ಅರ್ಜಿಯನ್ನು ಎಚ್ಚರಿಕೆಯಿಂದ ಭರ್ತಿ ಮಾಡಿ ಸಲ್ಲಿಸುವುದು. ಒಮ್ಮೆ ಅರ್ಜಿ ಸಲ್ಲಿಸಿದ ನಂತರ ಅರ್ಜಿಯಲ್ಲಿ ಯಾವುದೇ ತಿದ್ದುಪಡಿಗೆ ಅವಕಾಶವಿಲ್ಲ. ಯಾವುದೇ ದಾಖಲೆಗಳನ್ನು ಲಗತ್ತಿಸಲು, ಸಲ್ಲಿಸಿದ ಅರ್ಜಿಯನ್ನು ವಾಪಸ್ಸು ಪಡೆಯಲು, ಒಂದೇ ಹುದ್ದೆಗೆ ಎರಡು ಬಾರಿ ಅರ್ಜಿ ಸಲ್ಲಿಸಲು ಅವಕಾಶವಿಲ್ಲ. ಅರ್ಜಿಯನ್ನು ಸಲ್ಲಿಸುವಾಗ ಯಾವುದೇ ತಿದ್ದುಪಡಿಗಳಿದ್ದಲ್ಲಿ, ಹೊಡೆದು ಹಾಕಿ, ಹೊಡೆದು ಹಾಕಿದಲ್ಲಿ ಅರ್ಜಿದಾರರು ಪೂರ್ಣ ಸಹಿ ಮಾಡಿರಬೇಕು.

ವಿಶೇಷ ಸೂಚನೆ: ಕೊನೆಯ ದಿನಾಂಕದ ನಂತರ ನೇರವಾಗಿ ಅಥವಾ ಅಂಚೆಯ ಮೂಲಕ ಸ್ವೀಕೃತವಾದ ಯಾವುದೇ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ದಾಖಲೆಗಳನ್ನು/ಭಾವಚಿತ್ರ/ಸಹಿಯನ್ನು ನಮೂದಿಸದೇ ಇರುವ/ಅಸ್ಪಷ್ಟ ನಮೂದುಗಳನ್ನು/ಅಸ್ಪಷ್ಟ ದಾಖಲೆಗಳನ್ನು ಸಲ್ಲಿಸಿರುವ ಅರ್ಜಿಯನ್ನು ಯಾವುದೇ ಮುನ್ಸೂಚನೆ ನೀಡದೇ ತಿರಸ್ಕರಿಸಲಾಗುವುದು.

**ಅರ್ಹತಾ ಷರತ್ತುಗಳು :**

1) ಭಾರತೀಯ ನಾಗರೀಕನಾಗಿರತಕ್ಕದ್ದು.

2) ಅಭ್ಯರ್ಥಿಯು ದೈಹಿಕವಾಗಿ ಹಾಗೂ ಮಾನಸಿಕವಾಗಿ ಆರೋಗ್ಯವಂತರಾಗಿರಬೇಕು ಮತ್ತು ಅವರ ನೇಮಕಾತಿಯು ನಿಗದಿಪಡಿಸಿದ ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕವನ್ನುಂಟು ಮಾಡುವ ಸಂಭವವಿರುವ ಯಾವುದೇ ದೈಹಿಕ ನ್ಯೂನ್ಯತೆಯಿಂದ ಮುಕ್ತರಾಗಿರಬೇಕು.

3) ದೈಹಿಕವಾಗಿ ಅನರ್ಹರಾಗಿದ್ದಾರೆಂಬುದಾಗಿ ವೈದ್ಯಕೀಯ ಮಂಡಳಿಯ ವರದಿಯ ಮೇಲೆ ಅನರ್ಹರೆಂಬುದಾಗಿ ತಿರಸ್ಕರಿಸುವ ಪೂರ್ಣ ವಿವೇಚನೆಯನ್ನು ನೇಮಕಾತಿ ಪ್ರಾಧಿಕಾರವು ಕಾಯ್ದಿರಿಸಿಕೊಂಡಿದೆ ಮತ್ತು ನೇಮಕಾತಿ ಪ್ರಾಧಿಕಾರದ ವಿವೇಚನೆಯು ಯಾವುದೇ ವಿಧದಲ್ಲೂ ನಿಯಮಗಳ ಮೂಲಕ ಸೀಮಿತವಾಗಿರುವುದಿಲ್ಲ.

**1) ನೇಮಕಾತಿ ವಿಧಾನ :**

ರಾಷ್ಟ್ರೀಯ ಆಯುಷ್ ಅಭಿಯಾನದಡಿಯಲ್ಲಿ ಅಭಿವೃದ್ಧಿಪಡಿಸಲಾದ ಆಯುಷ್ ಆರೋಗ್ಯ ಮತ್ತು ಕ್ಷೇಮ ಕೇಂದ್ರ ಸೋಮೇನಹಳ್ಳಿ ಇಲ್ಲಿಗೆ Community Health officer (CHO)) ಪರಿಶಿಷ್ಟ ಜಾತಿಗೆ ಮೀಸಲಾಗಿರುತ್ತದೆ. ಮಾನ್ಯ ಆಯುಕ್ತರು, ಆಯುಷ್ ಇಲಾಖೆ, ಬೆಂಗಳೂರು ಇವರು ನೀಡಿರುವ ಮಾರ್ಗಸೂಚಿಗಳನ್ವಯ, ನಿಯಮಾನುಸಾರ ಗುತ್ತಿಗೆ ಷರತ್ತುಗಳನ್ವಯ ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನೇಮಕಾತಿ ಪ್ರಕ್ರಿಯೆಯನ್ನು ನಡೆಸಲಾಗುವುದು. ಅಭ್ಯರ್ಥಿಗಳು ಸಲ್ಲಿಸಿರುವ ಅರ್ಜಿಗಳನ್ನು ಪರಿಶೀಲಿಸಿ, ಹುದ್ದೆಗೆ ನಿಗದಿಪಡಿಸಿದ ವಿದ್ಯಾರ್ಹತೆಯಲ್ಲಿ ಅಭ್ಯರ್ಥಿಯು ಹೊಂದಿರುವ ಮೆರಿಟ್ ಮತ್ತು ರೋಸ್ಟರ್ ಪರಿಗಣಿಸಿ ಪ್ರಕಟಿಸಿರುವ ಹುದ್ದೆಗೆ ಅನುಗುಣವಾಗಿ ನಿಯಮಾನುಸಾರ ನಿರ್ದಿಷ್ಟ ಅನುಪಾತದಲ್ಲಿ ಅರ್ಹ ಅಭ್ಯರ್ಥಿಗಳನ್ನು ಪಟ್ಟಿ ಮಾಡಿ ಅವರ ಮೂಲ ದಾಖಲೆಗಳನ್ನು ಪರಿಶೀಲನೆಗೆ ಕರೆಯಲಾಗುವುದು. ಮೂಲ ದಾಖಲೆಗಳನ್ನು ಪರಿಶೀಲಿಸಿ, ಅರ್ಹರಾದ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯಲಾಗುವುದು. ಹುದ್ದೆಗೆ ನಿಗದಿಪಡಿಸಿದ ವಿದ್ಯಾರ್ಹತೆಯಲ್ಲಿ ಗಳಿಸಿದ ಅಂಕಗಳು, ಸಂದರ್ಶನದಲ್ಲಿ ಗಳಿಸಿದ ಅಂಕಗಳನ್ನು ಆಧರಿಸಿ ನೇಮಕಾತಿ ಮಾಡಿಕೊಳ್ಳಲಾಗುವುದು.

**2) ಪತ್ರ ವ್ಯವಹಾರ:**

ಜಿಲ್ಲಾ ಆಯುಷ್ ಕಛೇರಿಯು ಅಭ್ಯರ್ಥಿಗಳೊಂದಿಗೆ, ಯಾವುದೇ ಪತ್ರ ವ್ಯವಹಾರಗಳನ್ನು ನಡೆಸುವುದಿಲ್ಲ. ಮೂಲ ದಾಖಲಾತಿಗಳ ಪರಿಶೀಲನೆಗೆ ಹಾಗೂ ಸಂದರ್ಶನಕ್ಕೆ ಅರ್ಹರಾದ ಅಭ್ಯರ್ಥಿಗಳಿಗೆ ರಿಜಿಸ್ಟರ್ ಅಂಚೆಯ ಮೂಲಕ ತಿಳಿಸಲಾಗುವುದು. ವಿಳಾಸ ಬದಲಾವಣೆಯಿದ್ದಲ್ಲಿ ಅಭ್ಯರ್ಥಿಗಳು ಲಿಖಿತ ಮನವಿ ಮೂಲಕ ಜಿಲ್ಲಾ ಆಯುಷ್ ಕಛೇರಿಯ ಗಮನಕ್ಕೆ ತರತಕ್ಕದ್ದು, ಆದಾಗ್ಯೂ ಸಹ ನೇಮಕಾತಿ ಪ್ರಾಧಿಕಾರವು ಈ ವಿಚಾರದಲ್ಲಿ ಯಾವುದೇ ಜವಾಬ್ದಾರಿಯನ್ನು ವಹಿಸಿಕೊಳ್ಳುವುದಿಲ್ಲ. ಈ ಬಗ್ಗೆ ಅಭ್ಯರ್ಥಿಗಳು ಎಚ್ಚರ ವಹಿಸತಕ್ಕದ್ದು.

**3) ಪ್ರಾಮುಖ್ಯವಾದ ಸೂಚನೆಗಳು**

ಅಭ್ಯರ್ಥಿಗಳು ಕ್ಲೇಮು ಮಾಡುವ ಯಾವುದೇ ಪ್ರಮಾಣ ಪತ್ರಗಳನ್ನು ಸಕ್ಷಮ ಪ್ರಾಧಿಕಾರದಿಂದ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕದೊಳಗಾಗಿ ಕಡ್ಡಾಯವಾಗಿ ಪಡೆದಿಟ್ಟುಕೊಂಡು ಅರ್ಜಿಯೊಂದಿಗೆ ಒಂದು ಸೆಟ್‌ಜೆರಾಕ್ಸ್ ಪ್ರತಿಗಳನ್ನು ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ಅವರ ಅಭ್ಯರ್ಥಿತನವನ್ನು ಪರಿಗಣಿಸಲಾಗುವುದಿಲ್ಲ ಹಾಗೂ ಮೂಲ ದಾಖಲಾತಿ ಪರಿಶೀಲನೆ ಸಮಯದಲ್ಲಿ ಇದೇ ಪ್ರಮಾಣ ಪತ್ರಗಳ ಮೂಲ ಪ್ರತಿಗಳನ್ನು ಪರಿಶೀಲನೆಗೆ ಹಾಜರುಪಡಿಸತಕ್ಕದ್ದು.

**4) ವಿಶೇಷ ಸೂಚನೆಗಳು :**

1) ಗುತ್ತಿಗೆ ಆಧಾರದ ಮೇಲೆ ಮಾಡುವ ಈ ನೇಮಕಾತಿಯು ಸಂಪೂರ್ಣ ತಾತ್ಕಾಲಿಕವಾಗಿದ್ದು, ಈ ನೇಮಕಾತಿಯು ಮಾನ್ಯ ಆಯುಕ್ತರು, ಆಯುಷ್ ಇಲಾಖೆ ಇವರು ನಿರ್ದಿಷ್ಟ ಪಡಿಸಿದ ಸೂಚನೆಯಂತೆ **"ಜಿಲ್ಲಾ ಆಯುಷ್ ಸಮಿತಿ"** ನಡೆಸುತ್ತದೆ. ಮಾನ್ಯ ಆಯುಕ್ತರು, ಆಯುಷ್ ಇಲಾಖೆ ಇವರ ಸೂಚನೆ ಮೇರೆಗೆ ಅಥವಾ ನೇಮಕಾತಿ ಪ್ರಾಧಿಕಾರದ ಅಧ್ಯಕ್ಷರಾದ ಮಾನ್ಯ ಜಿಲ್ಲಾಧಿಕಾರಿಗಳ ಸೂಚನೆಯ ಮೇರೆಗೆ ಈ ನೇಮಕಾತಿಯನ್ನು ಪೂರ್ಣಗೊಳಿಸಬಹುದು ಅಥವಾ ಯಾವುದೇ ಹಂತದಲ್ಲಿಯಾದರೂ ಈ ನೇಮಕಾತಿಯನ್ನು ತಡೆ ಹಿಡಿಯಬಹುದು ಅಥವಾ ರದ್ದುಪಡಿಸಬಹುದು. ಇದಕ್ಕೆ ಒಪ್ಪಿ ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸಬೇಕು.

2) ಅರ್ಜಿ ಸಲ್ಲಿಸಲು ಅಥವಾ ನೇಮಕಾತಿ ಕುರಿತು ಯಾವುದೇ ಗೊಂದಲಗಳಿದ್ದಲ್ಲಿ ಮೇಲ್ಕಂಡ ವಿಳಾಸದಲ್ಲಿರುವ ಜಿಲ್ಲಾ ಆಯುಷ್ ಕಛೇರಿಯನ್ನು ಕಛೇರಿ ಸಮಯದಲ್ಲಿ ಖುದ್ದಾಗಿ ಅಥವಾ ದೂರವಾಣಿ ಮೂಲಕ ಸಂಪರ್ಕಿಸಬಹುದಾಗಿದೆ.

3) ಅಭ್ಯರ್ಥಿಗಳು ಕನ್ನಡ ಭಾಷೆಯ ಓದು, ಬರಹ ಚೆನ್ನಾಗಿ ಬಲ್ಲವರಾಗಿರಬೇಕು.

4) ಅಪೂರ್ಣವಾಗಿರುವ, ಫೋಟೋ ಮತ್ತು ಸಹಿಯನ್ನು ಹೊಂದಿರದ/ ದಾಖಲೆಗಳನ್ನು ಸಲ್ಲಿಸದೇ ಇರುವ ಅರ್ಜಿಯನ್ನು ತಿರಸ್ಕರಿಸಲಾಗುವುದು.

5) ಅಭ್ಯರ್ಥಿಗಳು ತಮ್ಮ ಮಾಹಿತಿಗಾಗಿ ಭರ್ತಿ ಮಾಡಿ ಸಲ್ಲಿಸಿದ ಅರ್ಜಿಯ ಮತ್ತು ಲಗತ್ತಿಸಲಾದ ದಾಖಲೆಗಳ ಒಂದು ಜೆರಾಕ್ಸ್ ಪ್ರತಿಯನ್ನು ಕಡ್ಡಾಯವಾಗಿ ತಮ್ಮೊಂದಿಗೆ ಇಟ್ಟುಕೊಳ್ಳಲು ಸೂಚಿಸಿದೆ.

6) ಅಭ್ಯರ್ಥಿಗಳು ತಮ್ಮ ಅರ್ಜಿಗಳಲ್ಲಿ ನೀಡುವ ಮಾಹಿತಿಗಳ ಆಧಾರದ ಮೇಲೆ ಅವರುಗಳು ಸಂದರ್ಶನಕ್ಕೆ/ನೇಮಕಾತಿಗೆ ಅರ್ಹರೇ ಎಂಬುದನ್ನು ಪರಿಶೀಲಿಸಿ ಮೇಲ್ನೋಟಕ್ಕೆ ಅರ್ಹರೆಂದು ಕಂಡು ಬಂದ ಅಭ್ಯರ್ಥಿಗಳಿಗೆ ಮಾತ್ರ ಮೂಲ ದಾಖಲೆ ಪರಿಶೀಲನೆಗೆ ಮತ್ತು ಸಂದರ್ಶನಕ್ಕೆ ಪತ್ರಗಳನ್ನು ರಿಜಿಸ್ಟರ್ ಅಂಚೆ ಮೂಲಕ ಕಳುಹಿಸಲಾಗುವುದು ಆದ್ದರಿಂದ ನಿಗದಿಪಡಿಸಿದ, ವಿದ್ಯಾರ್ಹತೆ, ಮೀಸಲಾತಿ, ಇತ್ಯಾದಿಗಳಿಗನುಗುಣವಾಗಿ ಅರ್ಜಿಯಲ್ಲಿ ಸರಿಯಾದ ಮಾಹಿತಿ ನೀಡುವುದು ಅಭ್ಯರ್ಥಿಗಳ ಜವಾಬ್ದಾರಿಯಾಗಿರುತ್ತದೆ. ತಪ್ಪು ಮಾಹಿತಿ ನೀಡಿದ್ದಲ್ಲಿ ಅಂತಹ ಅಭ್ಯರ್ಥಿಗಳ ಅರ್ಜಿಯ ಅಭ್ಯರ್ಥಿತ್ವವನ್ನು ಕೂಡಲೇ ರದ್ದು ಪಡಿಸುವುದಲ್ಲದೇ ಅಧ್ಯಕ್ಷರು ಮತ್ತು ಜಿಲ್ಲಾಧಿಕಾರಿಗಳು, ಇವರು ವಿಧಿಸುವ ದಂಡನೆಗೆ ಗುರಿಯಾಗುತ್ತಾರೆ. ಆದುದರಿಂದ ಅರ್ಜಿ ಸಲ್ಲಿಸುವ ಮುನ್ನ ಅವರು ನೀಡಿರುವ ಎಲ್ಲಾ ಮಾಹಿತಿಯು ಸರಿಯಾಗಿದೆ ಎಂದು ಖಚಿತಪಡಿಸಿಕೊಂಡು ನಂತರ ಅರ್ಜಿಯನ್ನು ಸಲ್ಲಿಸಲು ತಿಳಿಸಿದೆ.

7) ಅಭ್ಯರ್ಥಿಗಳ ಮೂಲ ದಾಖಲೆಗಳ ಪರಿಶೀಲನೆ ಸಂದರ್ಭದಲ್ಲಿ ಮೂಲ ಪ್ರಮಾಣ ಪತ್ರಗಳನ್ನು ಸಲ್ಲಿಸದಿದ್ದಲ್ಲಿ ಅಂತಹ ಅಭ್ಯರ್ಥಿಗಳನ್ನು ತಿರಸ್ಕರಿಸಲಾಗುವುದು. ಅರ್ಜಿಯೊಂದಿಗೆ ನಕಲು ಪ್ರತಿಗಳನ್ನು ಸಲ್ಲಿಸಿದ ಸದರಿ ಪ್ರಮಾಣ ಪತ್ರಗಳ ಮೂಲ ಪ್ರತಿಗಳನ್ನು ಪರಿಶೀಲನೆ ಸಂದರ್ಭದಲ್ಲಿ ಹಾಜರುಪಡಿಸತಕ್ಕದ್ದು.

8) ಮೂಲ ದಾಖಲಾತಿಗಳ ಪರಿಶೀಲನೆ ಹಾಗೂ ಸಂದರ್ಶನಕ್ಕೆ ಅರ್ಹರಾದ ಅಭ್ಯರ್ಥಿಗಳು ಗೈರು ಹಾಜರಾದಲ್ಲಿ ಅವರನ್ನು ನೇಮಕಾತಿಗೆ ತಿರಸ್ಕರಿಸಲಾಗುವುದು. ಯಾವುದೇ ಕಾರಣಕ್ಕೂ ಇನ್ನೊಂದು ಅವಕಾಶವನ್ನು ಕೊಡಲಾಗುವುದಿಲ್ಲ.

9) ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ನಿಗದಿಪಡಿಸಿದ ವಿದ್ಯಾರ್ಹತೆಗಳನ್ನು ಹೊಂದಿರಬೇಕು. ಅರ್ಜಿಗಳನ್ನು ಸ್ವೀಕರಿಸಲು ನಿಗದಿ ಪಡಿಸಿದ ಕೊನೆಯ ದಿನಾಂಕದೊಳಗೆ ನಿಗದಿತ ವಿದ್ಯಾರ್ಹತೆಯ ಪರೀಕ್ಷೆಯನ್ನು ಬರೆದು ಫಲಿತಾಂಶಕ್ಕಾಗಿ ಕಾಯುತ್ತಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಾಗಿರುವುದಿಲ್ಲ.

10) ನೇಮಕಾತಿಗೊಂಡವರು ಕೇಂದ್ರ ಸ್ಥಾನದಲ್ಲಿ ತಂಗಿದ್ದು 24 ಗಂಟೆಗಳಲ್ಲೂ ಯಾವುದೇ ತುರ್ತು ಸೇವೆಗೆ ಲಭ್ಯವಿದ್ದು, ಸೇವೆ ಸಲ್ಲಿಸುವ ಷರತ್ತಿಗೆ ಒಳಪಟ್ಟಿರಬೇಕು.

11) Community Health officer (CHO) **ನಿರ್ವಹಿಸಬೇಕಾದ ಕರ್ತವ್ಯಗಳು ಮತ್ತು ಜವಾಬ್ದಾರಿಗಳನ್ನು ಈ ಅಧಿಸೂಚನೆಯೊಂದಿಗೆ ನೀಡಲಾಗಿದೆ. ನೇಮಕಾತಿಗೊಂಡವರು ತೃಪ್ತಿಕರವಾದ ಹಾಜರಾತಿ ಮತ್ತು ತೃಪ್ತಿಕರವಾದ ಕರ್ತವ್ಯ ನಿರ್ವಹಣೆ ಮತ್ತು ಜವಾಬ್ದಾರಿಗಳ ನಿರ್ವಹಣೆ ಷರತ್ತಿಗೆ ಒಳಪಟ್ಟು ಪ್ರತಿ ತಿಂಗಳು ಸಂಚಿತ ಮೊತ್ತವನ್ನು ಮಾತ್ರ ಪಡೆಯುವುದು.**

12) ಗುತ್ತಿಗೆ ಆಧಾರದ ತಾತ್ಕಾಲಿಕ ನೇಮಕಾತಿಯನ್ನು ಯಾವುದೇ ಸಮಯದಲ್ಲಿ ಕಾರಣವಿಲ್ಲದೇ ಸರ್ಕಾರ, ಆಯುಷ್ ಇಲಾಖೆ ಅಥವಾ ಉಭಯ ಪಕ್ಷಗಳು ಒಂದು ತಿಂಗಳ ನೋಟೀಸು ಕೊಟ್ಟು ಸೇವೆಯನ್ನು ಪರ್ಯಾವಸನಗೊಳಿಸುವ ಷರತ್ತಿಗೊಳಪಟ್ಟಿರುತ್ತದೆ.

13) ನೇಮಕಾತಿಗೊಂಡ ಅಭ್ಯರ್ಥಿಗಳ ದುರ್ನಡತೆಯಿಂದಾಗಿ ಸರ್ಕಾರಕ್ಕೆ ನಷ್ಟ ಉಂಟಾದಲ್ಲಿ ಅದನ್ನು ಸರ್ಕಾರಕ್ಕೆ ಅಭ್ಯರ್ಥಿಗಳೇ ತುಂಬಿ ಕೊಡುವುದು.

14) ನೇಮಕಾತಿಗೊಂಡ ಅಭ್ಯರ್ಥಿಗಳು ಖಾಯಂ ನೇಮಕಾತಿಗಾಗಲೀ, ವಿಶ್ರಾಂತಿ ವೇತನಕ್ಕಾಗಲೀ, ನಿವೃತ್ತಿ ಉಪದಾನಕ್ಕಾಗಲೀ, ವೇತನ ಶ್ರೇಣಿಗಾಗಲೀ ಅಥವಾ ಯಾವುದೇ ಭತ್ಯೆಗಳನ್ನು ಪಡೆಯುವ ಹಕ್ಕನ್ನು ಹೊಂದಿರುವುದಿಲ್ಲ.

15) ಗುತ್ತಿಗೆ ಆಧಾರದ ತಾತ್ಕಾಲಿಕ ನೇಮಕಾತಿಯು ನಿರ್ದಿಷ್ಟ/ಉದ್ದೇಶಕ್ಕೆ ಆಗಿರುವುದರಿಂದ ಬೇರೆ ಯಾವುದೇ ಸ್ಥಳಕ್ಕೆ ವರ್ಗಾವಣೆ ಅಥವಾ ಪ್ರತಿ ನಿಯೋಜನೆ ಪಡೆಯಲು ಹಕ್ಕಿರುವುದಿಲ್ಲ.

16) ಈ ಹುದ್ದೆಗಳ ಹೆಸರಿನ ಮುಂದೆ ತೋರಿಸಿರುವಂತೆ ಮಾಹೆಯಾನ ಸಂಚಿತ ವೇತನ ನಿಗದಿಪಡಿಸಿದೆ. ಈ ಸಂಚಿತ ವೇತನ ಇತರೆ ಭತ್ಯೆಗಳು ಲಭ್ಯವಿರುವುದಿಲ್ಲ.

17) **ಈ ನೇಮಕಾತಿಗೆ ಮಾನ್ಯ ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ ರವರು ಅಧ್ಯಕ್ಷರಾಗಿದ್ದು, ನೇಮಕಾತಿ ಸಮಿತಿಯು ಅಭ್ಯರ್ಥಿಗಳನ್ನು ಆಯ್ಕೆ ಮಾಡುವಲ್ಲಿ ತೆಗೆದುಕೊಳ್ಳುವ ಯಾವುದೇ ತೀರ್ಮಾನಗಳಿಗೆ ಅಭ್ಯರ್ಥಿಗಳು ಬದ್ಧರಾಗಿರಬೇಕು.**

18) Community Health officer (CHO) **ಹುದ್ದೆಯು ಪರಿಶಿಷ್ಟ ಜಾತಿಗೆ ಮೀಸಲಾಗಿರುತ್ತದೆ. ರಿಕ್ತ ಸ್ಥಾನಕ್ಕೆ ಅನುಗುಣವಾಗಿ ಅಭ್ಯರ್ಥಿಗಳು ಅರ್ಜಿಸಲ್ಲಿಸದಿದ್ದಲ್ಲಿ / ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಅಂತಹರಿಕ್ತ ಸ್ಥಾನವನ್ನು ಭರ್ತಿ ಮಾಡಲು ಮಾನ್ಯ ಆಯುಕ್ತರು, ಆಯುಷ್ ಇಲಾಖೆ ರವರ ನಿರ್ದೇಶನದ ಮೇರೆಗೆ ನೇಮಕಾತಿ ಪ್ರಾಧಿಕಾರವು ನಿಯಮಾನುಸಾರ ತೀರ್ಮಾನವನ್ನು ಕೈಗೊಳ್ಳುವುದು.**

**19) ನೇಮಕಾತಿಯ ಯಾವುದೇ ಸಂದರ್ಭದಲ್ಲಿ ಸಾಂದರ್ಭಿಕವಾಗಿ ಉದ್ಭವವಾಗುವ ಯಾವುದೇ ಸಮಸ್ಯೆಗಳಿಗೆ ನೇಮಕಾತಿ ಸಮಿತಿಯ ಅಧ್ಯಕ್ಷರು ತೆಗೆದುಕೊಳ್ಳುವ ತೀರ್ಮಾನವೇ ಅಂತಿಮವಾಗಿರುತ್ತದೆ. ಅಭ್ಯರ್ಥಿಗಳು ಈ ಷರತ್ತಿಗೆ ಒಪ್ಪಿ ಅರ್ಜಿಯನ್ನು ಸಲ್ಲಿಸಬೇಕು.**

20) ಮೂಲ ದಾಖಲಾತಿಗಳ ಪರಿಶೀಲನೆ ಹಾಜರಾಗುವಾಗ ಅಭ್ಯರ್ಥಿಗಳು ಕಡ್ಡಾಯವಾಗಿ ಒಂದು ಸೆಟ್ ನಕಲು ಪ್ರತಿಗಳನ್ನು ಹಾಜರುಪಡಿಸಬೇಕು.

21) ಅರ್ಜಿಗಳ ಪರಿಶೀಲನೆ ಸಂದರ್ಭದಲ್ಲಿ ಅಭ್ಯರ್ಥಿತನಕ್ಕೆ ಸಂಬಂಧಿಸಿದಂತೆ ಯಾವುದೇ ಮಾಹಿತಿ ಅಥವಾ ಅವಶ್ಯಕವಾದಲ್ಲಿ ಅಭ್ಯರ್ಥಿಯು ಕೂಡಲೇ ಒದಗಿಸಬೇಕು. ಸಂಪರ್ಕಿಸಲು ಚಾಲ್ತಿಯಲ್ಲಿರುವ ಮೊಬೈಲ್ ಸಂಖ್ಯೆಯನ್ನು ಅರ್ಜಿಯಲ್ಲಿ ನಮೂದಿಸಬೇಕು.

22) ಈ ನೇಮಕಾತಿಯು ತಾತ್ಕಾಲಿಕವಾಗಿದ್ದು, ಖಾಯಂ ಅಭ್ಯರ್ಥಿಗಳು ನೇಮಕಾತಿಯಾದಲ್ಲಿ ಗುತ್ತಿಗೆ ಅವಧಿ ಮುಗಿಯುವ ಮುನ್ನವೇ ಅಭ್ಯರ್ಥಿಗಳನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಲಾಗುವುದು.

23) ಅಭ್ಯರ್ಥಿಗಳು ನೇಮಕಾತಿ ಅಧಿಸೂಚನೆಯಲ್ಲಿ ವಿಧಿಸಿದ ಎಲ್ಲಾ ಷರತ್ತುಗಳು ಮತ್ತು ನಿಬಂಧನೆಗಳನ್ನು ಬೇಷರತ್ತಾಗಿ ಒಪ್ಪಿ ಅರ್ಜಿ ಸಲ್ಲಿಸತಕ್ಕದ್ದು.

24) ಅಧಿಸೂಚನೆಯಲ್ಲಿ ಹೊರಡಿಸಲಾದ ಹುದ್ದೆಯನ್ನು ಮುಂದುವರೆಸಲು ಉದ್ದೇಶಿಸಲಾಗಿದ್ದರೂ ಸಹ ಅನುದಾನ ಲಭ್ಯತೆ ಅನುಸಾರ ಸೇವೆಯನ್ನು ಮಧ್ಯದಲ್ಲಿಯೇ ಪರ್ಯಾವಸನಗೊಳಿಸಬಹುದು.

25) ಸರ್ಕಾರ, ಮಾನ್ಯ ಆಯುಕ್ತರು ಅಥವಾ ಮಾನ್ಯ ಜಿಲ್ಲಾಧಿಕಾರಿಗಳು ಸೂಚನೆ ನೀಡಿದಲ್ಲಿ ನೇಮಕಾತಿ ಮಾಡಿಕೊಳ್ಳಬೇಕಾದ ಹುದ್ದೆಯನ್ನು ರದ್ದುಗೊಳಿಸಬಹುದು ಅಥವಾ ನೇಮಕಾತಿಯನ್ನು ತಡೆ ಹಿಡಿಯಬಹುದು ಇದಕ್ಕೆ ಒಪ್ಪಿ ಅರ್ಜಿ ಸಲ್ಲಿಸತಕ್ಕದ್ದು.

**26) ಒಂದು ವೇಳೆ ಮೀಸಲಿರಿಸುವರಿಕ್ತ ಸ್ಥಾನಕ್ಕೆ ಅನುಗುಣವಾಗಿ ಅಭ್ಯರ್ಥಿಗಳಿಂದ ಅರ್ಜಿ ಸ್ವೀಕೃತವಾಗದಿದ್ದಲ್ಲಿ ಅಥವಾ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಅಂತಹ ಸ್ಥಾನವನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಭರ್ತಿ ಮಾಡುವ ಬಗ್ಗೆ ಮಾನ್ಯ ಆಯುಕ್ತರು, ಆಯುಷ್ ಇಲಾಖೆ ಇವರ ನಿರ್ದೇಶನದ ಮೇರೆಗೆ ಮಾನ್ಯ ಜಿಲ್ಲಾಧಿಕಾರಿಗಳು ತೀರ್ಮಾನಿಸುತ್ತಾರೆ. ಈ ತೀರ್ಮಾನವು ಮಾನ್ಯ ಜಿಲ್ಲಾಧಿಕಾರಿಗಳ ಸಂಪೂರ್ಣ ವಿವೇಚನೆಗೆ ಒಳಪಟ್ಟಿರುತ್ತದೆ. ಈ ಸಂದರ್ಭದಲ್ಲಿ ಸರ್ಕಾರಿ ಹುದ್ದೆಗಳನ್ನು ನೇಮಕ ಮಾಡಿಕೊಳ್ಳಲು ಸರ್ಕಾರವು ಕಾಲಕಾಲಕ್ಕೆ ಹೊರಡಿಸಿದ ನೇಮಕಾತಿ ನಿಯಮಗಳನ್ನು ಅನುಸರಿಸಬಹುದು. ಒಟ್ಟಾರೆಯಾಗಿ ನೇಮಕಾತಿ ಸಮಿತಿ ಅಧ್ಯಕ್ಷರಾದ ಮಾನ್ಯ ಜಿಲ್ಲಾಧಿಕಾರಿಗಳು ತೆಗೆದುಕೊಳ್ಳುವ ತೀರ್ಮಾನವೇ ಅಂತಿಮವಾಗಿರುತ್ತದೆ. ಈ ತೀರ್ಮಾನಕ್ಕೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಬದ್ಧರಾಗಿರಬೇಕು.**

27) ಈ ನೇಮಕಾತಿಗಳನ್ನು ನಿಯಮಾನುಸಾರವೇ ಪೂರ್ಣಗೊಳಿಸಲಾಗುವುದು. ನೇಮಕಾತಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ನೇಮಕಾತಿ ಸಮಿತಿಯ ಮೇಲೆ ಯಾವುದೇ ರೀತಿಯಾದ ಒತ್ತಡವನ್ನು ಹೇರುವಂತಿಲ್ಲ. ಶಿಫಾರಸ್ಸನ್ನು ತರುವಂತಿಲ್ಲ. ತಮ್ಮನ್ನೇ ನೇಮಕಾತಿ ಮಾಡಿಕೊಳ್ಳುವಂತೆ ಮನವಿಯನ್ನು ಸಲ್ಲಿಸುವಂತಿಲ್ಲ. ಅನವಶ್ಯಕವಾಗಿ ಸಮಿತಿಯ ಸದಸ್ಯರನ್ನು ಭೇಟಿ ಮಾಡುವಂತಿಲ್ಲ ಸಮಿತಿಯ ಸದಸ್ಯರೊಂದಿಗೆ ಅನುಚಿತವಾಗಿ ನಡೆದುಕೊಳ್ಳುವಂತಿಲ್ಲ. ಒಂದು ವೇಳೆ ಯಾವುದೇ ಅಭ್ಯರ್ಥಿಗಳಿಂದ ಈ ವರ್ತನೆ / ಹಸ್ತಕ್ಷೇಪ ಕಂಡು ಬಂದಲ್ಲಿ ಯಾವುದೇ ಮುನ್ಸೂಚನೆಯಿಲ್ಲದೆ ಅವರ ಅಭ್ಯರ್ಥಿತ್ವವನ್ನು ರದ್ದು ಪಡಿಸುವುದಲ್ಲದೇ ನೇಮಕಾತಿ ಸಮಿತಿಯು ಅವನ / ಳ ವರ್ತನೆಯನ್ನು ಆಧರಿಸಿ ಅವರ ವಿರುದ್ಧ ಸೂಕ್ತ ಕ್ರಮಕ್ಕೆ ನಿರ್ಧರಿಸುತ್ತದೆ.

28) ಅರ್ಜಿ ಸಲ್ಲಿಸುವ ಕಡೆಯ ದಿನಾಂಕವು ಸಾರ್ವತ್ರಿಕ ರಜೆಯಾಗಿ ಘೋಷಣೆ ಮಾಡಲ್ಪಟ್ಟಲ್ಲಿ ನಂತರದ ದಿನವನ್ನು ಕಡೆಯ ದಿನವನ್ನಾಗಿಸಿ ಪರಿಗಣಿಸಲಾಗುವುದು.

**29) ಸಂದರ್ಶನದಲ್ಲಿ ಅಭ್ಯರ್ಥಿಗಳು ವಿಷಯದ ಬಗ್ಗೆ ಹೊಂದಿರುವ ಜ್ಞಾನ, ತಾಂತ್ರಿಕ ಪರಿಣಿತಿ, ಅನುಭವ ಇವುಗಳೊಂದಿಗೆ ದೈಹಿಕ, ಮಾನಸಿಕ ಸ್ಥಿತಿ, ಮನೋಭಾವ ಆರೋಗ್ಯ ಕ್ಷೇಮ ಕೇಂದ್ರಗಳಲ್ಲಿ ಪ್ರತಿ ತಿಂಗಳು ವರದಿಗಳನ್ನು ಆನ್‌ಲೈನ್ ಮುಖಾಂತರ ಸಲ್ಲಿಸುವುದರಿಂದ ಕಂಪ್ಯೂಟರ್ ಜ್ಞಾನ ಹೊಂದಿರಬೇಕು, ಇತ್ಯಾದಿ ವ್ಯಕ್ತಿತ್ವ ಪರೀಕ್ಷೆಗೆ ಸಂಬಂಧಿಸಿದ ಅಂಶಗಳನ್ನು ಪರಿಗಣಿಸಲಾಗುವುದು.**

30) ನೇಮಕಾತಿಯ ಪ್ರಕ್ರಿಯೆಯ ಪೂರ್ಣಗೊಳ್ಳುವವರೆಗೆ ಯಾವುದೇ ಹಂತದಲ್ಲಿ ಅಭ್ಯರ್ಥಿಗೆ ನೇಮಕಾತಿ ಪ್ರಕ್ರಿಯೆಯ ಯಾವುದೇ ಮಾಹಿತಿಯನ್ನು ಬಹಿರಂಗ ಪಡಿಸಲಾಗುವುದಿಲ್ಲ.

**31) ಸಂದರ್ಶನದಲ್ಲಿ ಯಾವುದೇ ಅಭ್ಯರ್ಥಿ ಅನುಚಿತ ವರ್ತನೆಯನ್ನು ತೋರಿದಲ್ಲಿ, ಅಸಮರ್ಥ ಎಂದು ಕಂಡು ಬಂದಲ್ಲಿ ಅಂತಹ ಅಭ್ಯರ್ಥಿಯನ್ನು ಅನರ್ಹಗೊಳಿಸಲಾಗುವುದು. ಸಂದರ್ಶನದಲ್ಲಿ ಅನರ್ಹಗೊಂಡ ಅಭ್ಯರ್ಥಿಯನ್ನು ನೇಮಕಾತಿ ಪ್ರಕ್ರಿಯೆಯಿಂದ ಕೈ ಬಿಡಲಾಗುವುದು.**

32) ಈ ನೇಮಕಾತಿಯಲ್ಲಿ ಪ್ರಮುಖವಾಗಿ ಮಾನ್ಯ ಆಯುಕ್ತರು, ಆಯುಷ್ ಇಲಾಖೆ, ಬೆಂಗಳೂರು ರವರು ಕಾಲಕಾಲಕ್ಕೆ ಹೊರಡಿಸಿದ ನಿಯಮಗಳು/ಮಾರ್ಗಸೂಚಿಗಳು ಮತ್ತು ಸ್ಪಷ್ಟೀಕರಣಗಳನ್ನು ಅಳವಡಿಸಿಕೊಳ್ಳಲಾಗುವುದು.

33) ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕದವರೆಗೆ ಕಾಯದೇ ಮುಂಚಿತವಾಗಿಯೇ ಅರ್ಜಿ ಸಲ್ಲಿಸಲು ಕೋರಿದೆ.

34) ಅರ್ಜಿ ಸಲ್ಲಿಸುವ ಕುರಿತು ಯಾವುದೇ ಗೊಂದಲಗಳಿದ್ದಲ್ಲಿ ಮಾಹಿತಿ ಅವಶ್ಯಕವಿದ್ದಲ್ಲಿ ಮೇಲ್ಕಂಡ ವಿಳಾಸದಲ್ಲಿರುವ ಜಿಲ್ಲಾ ಆಯುಷ್ ಕಛೇರಿಯನ್ನು ಸಂಪರ್ಕಿಸಲು ಅಭ್ಯರ್ಥಿಗಳಿಗೆ ತಿಳಿಸಿದೆ.

35) **ದುರ್ನಡತೆ** : ಒಬ್ಬ ಅಭ್ಯರ್ಥಿಯು ನಕಲಿ ವ್ಯಕ್ತಿಯಾಗಿರುವನೆಂದು ಅಥವಾ ಖೋಟಾದ ಸ್ತಾವೇಜು ಅಥವಾ ತಿದ್ದಲಾದ ದಸ್ತಾವೇಜುಗಳನ್ನು ಸಲ್ಲಿಸಿರುವನೆಂದು ಅಥವಾ ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವನೆಂದು ಅಥವಾ ವಾಸ್ತವಿಕ ಮಾಹಿತಿಯನ್ನು ಮರೆಮಾಚಿರುವನೆಂದು ಅಥವಾ ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವನೆಂದು ಅಥವಾ ಅನುಸರಿಸಲು ಪ್ರಯತ್ನಿಸಿರುವನೆಂದು ಅಥವಾ ಅವರ ನೇಮಕಾತಿಯ ಸಂಬಂಧದಲ್ಲಿ ಯಾವುದೇ ಇತರೆ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಬಿಸಿರುವನೆಂದು, ಕಂಡುಬಂದಲ್ಲಿ ಅವನು / ಅವಳು ಸ್ವತಃ ಕ್ರಿಮಿನಲ್ ವ್ಯವಹರಣೆಗಳಿಗೆ ಮತ್ತು ಶಿಸ್ತು ಕ್ರಮಕ್ಕೆ ಒಳಪಡುವುದಲ್ಲದೆ ಅವರ ಅಭ್ಯರ್ಥಿತ್ವವನ್ನು ರದ್ದು ಪಡಿಸಲಾಗುವುದು.

## Main Duties of Community Health Officer (CHO)

1. Attend daily OPD in HWC and in the community as per the schedule
2. Overall planning and monitoring of community level activities including yoga and herbal garden.
3. Participate / Organize meetings.
4. The CHO as a team Leader and in-charge of HWC will broadly be expected to carry out public health funcations, ambulatory care and management.
5. ensure that all households in the service areas are listed empanelled a database is maintained in digital format / paper format as required by state.
6. prakriti analysis of every population in the catchment area above 18 years of age.
7. Any other work assigned by DAO.

ಸದಸ್ಯ ಕಾರ್ಯದರ್ಶಿಗಳು,
ಜಿಲ್ಲಾ ಆಯುಷ್ ಸಮಿತಿ ಮತ್ತು
ಜಿಲ್ಲಾ ಆಯುಷ್ ಅಧಿಕಾರಿಗಳು,
ಚಿಕ್ಕಬಳ್ಳಾಪುರ.

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ
ಜಿಲ್ಲಾ ಆಯುಷ್ ಅಧಿಕಾರಿಗಳ ಕಾರ್ಯಾಲಯ,
ಜಿಲ್ಲಾಡಳಿತ ಭವನ, ರೂಮ್ ನಂ.ಜಿ.ಎ.11, ಶಿಡ್ಲಘಟ್ಟ ರಸ್ತೆ, ಚಿಕ್ಕಬಳ್ಳಾಪುರ–562101
ಇ–ಮೇಲ್:ayushcbpur@gmail.com ದೂರವಾಣಿ ನಂ–08156–277141

---

ಸಂಖ್ಯೆ:ಜಿ.ಆ.ಕ.ಚಿ/43/ಗು.ಸಿಬ್ಬಂದಿ/2023–24 ದಿನಾಂಕ:06–02–2024

## ಸಮುದಾಯ ಆರೋಗ್ಯ ಅಧಿಕಾರಿ ಹುದ್ದೆಗೆ ಅರ್ಜಿ

ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ, ಚಿಕ್ಕಬಳ್ಳಾಪುರ ಇದರ ವ್ಯಾಪ್ತಿಯಲ್ಲಿ ರಾಷ್ಟ್ರೀಯ ಆಯುಷ್ ಅಭಿಯಾನದಡಿಯಲ್ಲಿ ಅಭಿವೃದ್ಧಿಪದಿಸಲಾದ ಆಯುಷ್ ಆರೋಗ್ಯ ಮತ್ತು ಕ್ಷೇಮ ಸೋಮೇನಹಳ್ಳಿ ಇಲ್ಲಿಗೆ ಸಮುದಾಯ ಆರೋಗ್ಯ ಅಧಿಕಾರಿ Community Health officer (CHO) ಹುದ್ದೆಯನ್ನು ಗುತ್ತಿಗೆ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳಲು ಮಾನ್ಯ ಆಯುಕ್ತರು, ಆಯುಷ್ ಇಲಾಖೆ ರವರು ನಿಗದಿಪಡಿಸಿರುವ ನಿಯಮಗಳು/ಮಾರ್ಗಸೂಚಿಗಳನ್ವಯ ಹುದ್ದೆಯನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡುವ ಬಗ್ಗೆ ಅರ್ಜಿ.

ಪ್ರಕಟಣೆ: ಸಂಖ್ಯೆ ..............................................

ದಿನಾಂಕ..............................................ರಂದು ನೀಡಿದ ಜಾಹಿರಾತಿಗನುಸಾರವಾಗಿ

ಹುದ್ದೆಯ ಹೆಸರು.........................................................................

ಇತ್ತೀಚಿನ
ಭಾವಚಿತ್ರ

| | | |
|---|---|---|
| 1 | ಅಭ್ಯರ್ಥಿಯ ಹೆಸರು<br>(ದಪ್ಪ ಅಕ್ಷರಗಳಲ್ಲಿ) | |
| 2 | ಪುರುಷ/ಮಹಿಳೆ | |
| 3 | ತಂದೆಯ/ಗಂಡನ ಹೆಸರು | |
| 4 | ಹುಟ್ಟಿದ ದಿನಾಂಕ ಮತ್ತು ವಯಸ್ಸು | |
| 5 | ವಿವಾಹಿತರೇ/ಅವಿವಾಹಿತರೇ | |
| 6 | ವಾಸಸ್ಥಳ ವಿವರ:<br>ದೂರವಾಣಿ ಸಂಖ್ಯೆ: | |
| 7 | ಖಾಯಂ ವಿಳಾಸ<br>ದೂರವಾಣಿ/ಮೊಬೈಲ್ ಸಂಖ್ಯೆ:<br>ಇ–ಮೇ ಐಡಿ: | |
| 8 | ಯಾವ ವರ್ಗಕ್ಕೆ ಸೇರಿರುತ್ತೀರಾ? | ಸಾ.ಅ ☐ ಪ.ಜಾ ☐ ಪ.ಪಂ. ☐ ಪ್ರವರ್ಗ–1 ☐ 2ಎ ☐<br>2ಬಿ ☐ 3ಎ ☐ 3ಬಿ ☐ ಮಾ.ಸೈ.ಅ ☐ ಯೋ.ಅ ☐ |
| 9 | ವಿದ್ಯಾರ್ಹತೆ | |
| 10 | ಬಿ.ಎ.ಎಂ.ಎಸ್ ತೇರ್ಗಡೆ ಹೊಂದಿದ ವರ್ಷ ಮತ್ತು ಪಡೆದ ಶ್ರೇಣಿ | |
| 11 | ಕಂಪ್ಯೂಟರ್ ಪರೀಕ್ಷೆ ತೇರ್ಗಡೆಯಾದ ಪ್ರಮಾಣ ಪತ್ರ | |
| 12 | ಆಯುಷ್/ಆರೋಗ್ಯ ಸಂಸ್ಥೆಗಳಲ್ಲಿ ಕೆಲಸ ಮಾಡಿರುವ ಅನುಭವ ಪ್ರಮಾಣ ಪತ್ರ | |

ಮೇಲೆ ತಿಳಿಸಿರುವ ಎಲ್ಲಾ ಮಾಹಿತಿಗಳು ಸತ್ಯವಾಗಿರುತ್ತದೆಂದು ದೃಢೀಕರಿಸಿರುತ್ತೇನೆ.

ಅರ್ಜಿ ಸಲ್ಲಿಸಲು ಪ್ರಾರಂಭಿಕ ದಿನಾಂಕ: 09–02–2024, ಹಾಗೂ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:21–02–2024 ಸಂಜೆ: 4.00 ಗಂಟೆಯವರೆಗೆ.

ನಾನು ನೇಮಕಾತಿ ಅಧಿಸೂಚನೆಯಲ್ಲಿ ನೀಡಿದ ಎಲ್ಲಾ ಸೂಚನೆಗಳು ಮತ್ತು ಷರತ್ತುಗಳನ್ನು ಓದಿ, ಅರ್ಥೈಸಿಕೊಂಡಿರುತ್ತೇನೆ. ಆ ಎಲ್ಲಾ ಷರತ್ತು ಮತ್ತು ನಿಬಂಧನೆಗಳಿಗೆ ಸಂಪೂರ್ಣವಾಗಿ ಒಪ್ಪಿಯೇ ಈ ಅರ್ಜಿಯನ್ನು ಸಲ್ಲಿಸಿರುತ್ತೇನೆ. ಮೇಲೆ ತಿಳಿಸಿದಂತಹ / ನೀಡಿದಂತಹ ಎಲ್ಲಾ ಮಾಹಿತಿಗಳು ಸಮರ್ಪಕವಾಗಿದ್ದು, ಯಾವುದೇ ಸುಳ್ಳು ಮಾಹಿತಿ / ದಾಖಲಾತಿಗಳನ್ನು ನೀಡಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ. ಯಾವುದೇ ಸುಳ್ಳು ಮಾಹಿತಿ ಅಥವಾ ದಾಖಲಾತಿಗಳು ಕಂಡುಬಂದಲ್ಲಿ ನೇಮಕಾತಿ ಪ್ರಾಧಿಕಾರವು ನನ್ನ ಅಭ್ಯರ್ಥಿತ್ವವನ್ನು ಯಾವುದೇ ಸಂದರ್ಭದಲ್ಲಿಯಾದರೂ ರದ್ದುಪಡಿಸಬಹುದು ಮತ್ತು ಈ ತಪ್ಪಿಗೆ ವಿಧಿಸಬಹುದಾದ ಯಾವುದೇ ದಂಡನೆಯನ್ನು ಒಪ್ಪಿಕೊಳ್ಳಲು ನಾನು ಬದ್ಧನಾಗಿರುತ್ತೇನೆ.

ದಿನಾಂಕ: ಅಭ್ಯರ್ಥಿಯ ಸಹಿ:

ಸ್ಥಳ: ಅಭ್ಯರ್ಥಿಯ ಹೆಸರು:

ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಾಖಲಾತಿ ಪ್ರತಿಗಳು

1. ಹುದ್ದೆಗಳಿಗೆ ನಿಗದಿಪಡಿಸಲಾದ ವಿದ್ಯಾರ್ಹತೆಯ ಬಿ.ಎ.ಎಂ.ಎಸ್ ಅಂಕಪಟ್ಟಿ ಪ್ರಮಾಣ ಪತ್ರಗಳು.
2. ಜನ್ಮ ದಿನಾಂಕವನ್ನು ದೃಢೀಕರಿಸಿರುವ ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯ ಪ್ರಮಾಣ ಪತ್ರ.
3. ಮೀಸಲಾತಿ ಪ್ರಮಾಣ ಪತ್ರಗಳನ್ನು ಪ್ರಸ್ತುತ ಚಾಲ್ತಿಯಲ್ಲಿರುವ ನಿಗಧಿತ ನಮೂನೆಗಳಲ್ಲಿ ಸಲ್ಲಿಸುವುದು.
4. ವಾಸಸ್ಥಳದ ದೃಢೀಕರಣ ಪತ್ರವನ್ನು ಪ್ರಸ್ತುತ ಚಾಲ್ತಿಯಲ್ಲಿರುವ ನಿಗಧಿತ ನಮೂನೆಗಳಲ್ಲಿ ಸಲ್ಲಿಸುವುದು.
5. ಕಂಪ್ಯೂಟರ್ ಪರೀಕ್ಷೆ ತೇರ್ಗಡೆಯಾದ ಪ್ರಮಾಣ ಪತ್ರ ಸಲ್ಲಿಸುವುದು.
6. ಅರ್ಜಿ ಸಲ್ಲಿಸಲು ಪ್ರಾರಂಭಿಕ ದಿನಾಂಕ: 06–02–2024, ಹಾಗೂ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:15–02–2024 ಸಂಜೆ: 4.00 ಗಂಟೆಯವರೆಗೆ.

(ನಿಗದಿಪಡಿಸಿದ ಮೀಸಲಾತಿಯನ್ನು ಕೋರದೇ ಇತರೆ ಮೀಸಲಾತಿಯನ್ನು ಕೋರಿದ್ದಲ್ಲಿ ಅರ್ಜಿಯನ್ನು ತಿರಸ್ಕರಿಸಲಾಗುವುದು)